

# ವಿವೇಕ ಶಾನಭಾಗ

ಉತ್ತರ ಕನ್ನಡ ಜಿಲ್ಲೆಯ ಕುಮಟೆ ತಾಲ್ಲೂಕಿನ ವಿವೇಕ ಶಾನಭಾಗ ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಕನ್ನಡದ ಮಹತ್ವದ ಕಥೆಗಾರರಲ್ಲಿ ಒಬ್ಬರಾದ ಅವರು ಇದುವರೆಗೆ 'ಅಂಕುರ', 'ಲಂಗರು', 'ಹುಲಿ ಸವಾರಿ', 'ಮತ್ತೊಬ್ಬನ ಸಂಸಾರ', 'ಘಾಚರ್ ಘೋಚರ್' ಎಂಬ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ. 'ಸಕ್ಕರೆ ಬೊಂಬೆ', 'ಬಹುಮುಖಿ' ಎಂಬ ನಾಟಕಗಳನ್ನು, 'ಇನ್ನೂ ಒಂದು', 'ಒಂದು ಬದಿ ಕಡಲು', 'ಊರು ಭಂಗ' ಎಂಬ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ.
ಮನುಷ್ಯನ ಸ್ವಭಾವದಲ್ಲೇ ಇರುವ ತಣ್ಣನೆಯ ಕ್ರೌರ್ಯವನ್ನು, ಹಿಂಸೆಯನ್ನು, ಆಧುನಿಕ ಜಗತ್ತಿನಲ್ಲಿ ಗುರುತು ಕಳೆದುಕೊಂಡ ಮನುಷ್ಯರ ತಲ್ಲಣಗಳನ್ನು ಅವರ ಕತೆಗಳು ಪ್ರಕಟಿಸುತ್ತವೆ. ಬಾಳನ್ನು ಅದು ಇರುವಂತೆಯೇ ಸಾಗಿಸುವ ವ್ಯಕ್ತಿಗಳು ಅವರ ಕತೆಗಳಲ್ಲಿದ್ದಾರೆ. ಅವರ 'ಹುಲಿ ಸವಾರಿ', 'ಜಾಮೀನು ಸಾಹೇಬ', 'ಘಾಚರ್ ಘೋಚರ್', 'ಸುಧೀರನ ತಾಯಿ', 'ನಿರ್ವಾಣ' ಕನ್ನಡದ ಪ್ರಮುಖ ಕತೆಗಳಾಗಿವೆ. ಅತ್ಯಂತ ಸೂಕ್ಷ್ಮ, ನಿಖರ ಬರವಣಿಗೆಯ ವಿವೇಕರ ಮೂರು ಕಾದಂಬರಿಗಳು, ಎರಡು ನಾಟಕಗಳು ಅವರ ಸಾಹಿತ್ಯದ ಅಸಲು ಕಸುಬುದಾರಿಕೆಯನ್ನು, ಕಲೆಯೆಡೆಗಿನ ಬದ್ಧತೆಯನ್ನು ತೋರುವ ಕೃತಿಗಳಾಗಿವೆ. ಅವರು ಕೆಲವು ಕಾಲ 'ದೇಶ–ಕಾಲ' ಎಂಬ ಸಾಹಿತ್ಯ ಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸಿದ್ದರು.

**ನಾಲ್ಕು ರೂಮಿನ ದೊಡ್ಡ ಫ್ಲ್ಯಾಟ್‌ನಲ್ಲಿದ್ದವರು ನಾಲ್ಕು ಜನ. ಸೀತಾರಾಮ, ಹೆಂಡತಿ ಜಾನಕಿ. ಮಗಳು ರೇವತಿ ಮತ್ತು ನಾಗತ್ತೆ. ಗಂಡ ಹೆಂಡತಿ ಇಬ್ಬರೂ ಕಾಸಿಗೆ ಕಾಸು ಕೂಡಿಸಿ ದುಡ್ಡೇ ದೊಡ್ಡಪ್ಪನನ್ನು ಬ್ಯಾಂಕಿನಲ್ಲಿ ಸಾಕುತ್ತಿದ್ದರು. ಮೂವತ್ತೆರಡು ತುಂಬಿದರೂ ರೇವತಿಗೆ ಗಂಡು ಹುಡುಕುವ ತರಾತುರಿಯಲ್ಲಿರಲಿಲ್ಲ. ಮುದುಕಿ ಮಾತ್ರ ಅವಳಿಗೊಂದು ಗಂಡು ಹುಡುಕೋ ಎಂದು ಸದಾ ಪಿಟಿಪಿಟಿಗುಡುತ್ತ ಜಾತಕ, ಗ್ರಹಗತಿ, ಗುರುದೆಸೆ ಎಂದು ಗೊಣಗುತ್ತಿದ್ದಳು. ಸೀತಾರಾಮ ಒಂದೆರಡು ಕಡೆ ಪ್ರಯತ್ನಪಟ್ಟಿದ್ದ. ಒಂದೆಡೆಯಂತೂ ಎಲ್ಲವೂ ಆಗಿ ವರದಕ್ಷಿಣೆ ಮಾತುಕತೆಯಲ್ಲಿ ಮುರಿದುಹೋಯಿತು. ಮುಖ್ಯ, ಹುಡುಗಿ ಬೆಳ್ಳಗಿರುವುದೊಂದು ಬಿಟ್ಟರೆ ಉಳಿದಂತೆ ಕುರೂಪಿಯೇ. ತೆಳ್ಳಗಿನ ದೇಹಕ್ಕೆ ಸಪೂರ ಕೈಕಾಲು, ಕಣ್ಣುಗಳ ಕೆಳಗೆ ನಸುಗಪ್ಪಾದ ಚರ್ಮ, ಮುಖಕ್ಕೆ ಯಾವ ರೀತಿಯಲ್ಲೂ ಒಪ್ಪದ ದಪ್ಪ ತುಟಿಗಳು, ಚಪ್ಪಟೆ ಮೂಗು, ಬಾಯಿ ತೆರೆದರೆ ಮೇಲ್ಗಡೆ ಹಲ್ಲು ಸಾಲಿನ ಮಧ್ಯೆ ದೊಡ್ಡ ಸಂದಿ. ಅವಳಿಗೋ ನಾಲಿಗೆಯನ್ನು ಆ**